डक्कन हेराल्ड / हुबली
DECCAN HERALD/HUBLI.
31 MAR 2018

# SWR seeks Election Commission's nod to start new trains

**Chiranjeevi Kulkarni**

**BENGALURU, DHNS:** The South Western Railways has approached the Election Commission (EC) seeking permission to flag off new trains and inaugurate a slew of works.

Apart from a weekly express train between Mysuru and Renigunta, the railways plan to regularise Yeshwantpur-Hubballi and Yeshwantpur-Pandharpur weekly express trains, which are currently run on special occasions and extend the Yashwantpur-Solapur line to Hassan.

The list of works included the inauguration of new station building at Yelahanka, escalators at Krantiveera Sangolli Rayanna station (Bengaluru City) two lifts at Hosapete and work on new line between Tumakuru and Rayadurga.

"We were making final arrangements for the event and planned it for March 28 when the elections were announced. Most of these works were approved and completed months ago and are aimed at providing convenience to the public. We hope to get a green signal from the poll panel instead of making the people wait for two more months," a senior official told *DH* on condition of anonymity. Another official said that soon after issue of notification for new trains, election schedule was declared and model code of conduct came into force. "Because of this reason, we will start running trains without any formal function. No elected representative will attend the first run of new trains in compliance with the code of conduct," he added.

"The Bagalkot-Khajjidoni line got approval from commissioner of railway safety about five months ago, but we couldn't start a train on the route. There is a huge demand for the Renigunta train, which will run via Katpadi, and the extension of train to Hassan will reduce the congestion at Yeshwantpur. Thousands of people will be benefited if the election commission approves our request," the official said.

Mahesh K, a railway activist from Hosapete, said the new lifts at the station have been powered off and aged people were still forced to climb the stairs. Lokesh T P from Karnataka Railway Vedike said people's convenience was more important than publicity for the politicians. "The works should be inaugurated without involving the leaders. It is good that officials are putting people's interest before the formalities." A programme scheduled for Wednesday had to be cancelled due to model code of conduct.

## Awaiting approval

**New trains**

- Mysuru - Renigunta weekly express
- Yeshwantpur-Pandharpur weekly express
- Yeshwantpur-Hubballi weekly express
- Extension of Solapur-Yeshwantpur daily express to Hassan
- New train between Bagalkot and Khajjidoni

**Inaugurations**

- Lift at Platform **no.1** and escalator on Platform no **9/10** at KSR station
- New Station building at Yelahanka
- 2 lifts on Platform **no.1** and **2** and **3** at Hosapete
- Work on Tumakuru-Rayadurga New Line



संयुक्त कर्नाटक/हुबली
SAMYUKTHA KARNATAKA/HUBLI.
31 MAR 2018

(8)

# ಬುಲೆಟ್ ರೈಲಿಗೆ ಭರದ ಸಿದ್ಧತೆ

**ಅಹಮದಾಬಾದ್** : ರಾಷ್ಟ್ರೀಯ ಹೈಸ್ಪೀಡ್ ರೈಲ್ವೇ ಕಾರ್ಪೋರೇಶನ್ ಲಿಮಿಟೆಡ್ ಬುಲೆಟ್ ರೈಲು ನಿಲ್ದಾಣಕ್ಕಾಗಿ ಸಬರಮತಿ ಹಳೆಯ ಮತ್ತು ಹೊಸ ನಿಲ್ದಾಣಗಳ ನಡುವಣ ಭೂಮಿಯ ಸ್ವಾಧೀನ ಪ್ರಕ್ರಿಯೆಗಳನ್ನು ಆರಂಭಿಸಿದೆ. ಬುಲೆಟ್ ರೈಲು ನಿಲ್ದಾಣವು ಈಗಿನ ಹಳೆಯ ಮತ್ತು ಹೊಸ ನಿಲ್ದಾಣಗಳ ನಡುವೆ ಎತ್ತರದ ಪ್ರದೇಶದಲ್ಲಿ ಇರಲಿದೆ. ಉದ್ದೇಶಿತ ಅವಧಿಗಿಂತ ಒಂದು ವರ್ಷ ಮುನ್ನವೇ ಬುಲೆಟ್ ರೈಲು ಹಳಿಗಿಳಿಯಲಿದೆ.

ಬುಲೆಟ್ ರೈಲು ಪ್ರಯಾಣ ಸಬರಮತಿ ನಿಲ್ದಾಣದಿಂದಲೇ ಆರಂಭವಾಗಿ ಅಲ್ಲೇ ಕೊನೆಗೊಳ್ಳುತ್ತದೆ. ಮುಂಬೈ (ಬಾಂದ್ರಾ-ಕುರ್ಲಾ ಕಾಂಪ್ಲೆಕ್ಸ್) ಮತ್ತು ಸಬರಮತಿ ನಡುವಣ ವೇಗದ ರೈಲು ಪ್ರಯಾಣದ ಅವಧಿ 2 ಗಂಟೆ 07 ನಿಮಿಷ ಆಗಲಿದೆ. ಎಲ್ಲ ನಿಲ್ದಾಣಗಳಲ್ಲಿ ನಿಲುಗಡೆ ಇದ್ದರೆ ಪ್ರಯಾಣದ ಅವಧಿ 2.58 ಗಂಟೆ ಆಗಲಿದೆ ಎಂದು ಎನ್‌ಎಚ್‌ಎಸ್‌ಆರ್‌ಸಿ ಅಧಿಕಾರಿಗಳು ತಿಳಿಸಿದ್ದಾರೆ.

ದಟ್ಟಣೆಯ ಅವಧಿಯಲ್ಲಿ- ಬೆಳಗ್ಗೆ 7 ರಿಂದ 10 ಗಂಟೆ ಹಾಗೂ ಸಂಜೆ 5ರಿಂದ 7 ಗಂಟೆ ಅವಧಿಯಲ್ಲಿ ಪ್ರತಿ ಗಂಟೆಗೆ ಮೂರು ರೈಲುಗಳ ಓಡಾಟ (ಪ್ರತಿ 20 ನಿಮಿಷಗಳಿಗೊಂದರಂತೆ) ಇರಲಿದೆ. ದಟ್ಟಣೆ ಇಲ್ಲದ ಅವಧಿಯಲ್ಲಿ ಗಂಟೆಗೆ ಎರಡು ರೈಲುಗಳು ಓಡಾಟ ನಡೆಸಲಿವೆ.

ಓಡಾಟದ ಆರಂಭದಲ್ಲಿ ರೈಲಿನಲ್ಲಿ 750 ಮಂದಿ ಪ್ರಯಾಣಿಸಬಹುದು. ಕ್ರಮೇಣ ಪ್ರಯಾಣಿಕರ ಸಾಮರ್ಥ್ಯವನ್ನು 1,250ಕ್ಕೆ ಹೆಚ್ಚಳ ಮಾಡಲಾಗುವುದು ಎಂದು ಎನ್‌ಎಚ್‌ಎಸ್‌ಆರ್‌ಸಿ ಸಾರ್ವಜನಿಕ ಸಂಪರ್ಕಾಧಿಕಾರಿ ಧನಂಜಯ್ ಕುಮಾರ್ ತಿಳಿಸಿದರು. ಬುಲೆಟ್ ರೈಲಿನ ವಿನ್ಯಾಸ ಗಂಟೆಗೆ 350 ಕಿ.ಮೀ ವೇಗಕ್ಕೆ ಸೂಕ್ತವಾಗಿರಲಿದ್ದು, ಗರಿಷ್ಠ 320 ಕಿ.ಮೀ ವೇಗದಲ್ಲಿ ಓಡಾಟ ನಡೆಸಲಿದೆ.



- ಭೂಮಿ ಪೂಜೆ ಬೆನ್ನಲ್ಲೇ ಭೂಸ್ವಾಧೀನ ಶುರು
- 2022ಕ್ಕೆ ಯೋಜನೆ ಕಾರ್ಯಾರಂಭ ಉದ್ದೇಶ
- ದೇಶದ ಮೊದಲ ಮಹತ್ವಾಕಾಂಕ್ಷೆಯ ರೈಲು
- ಸಬರಮತಿ-ಮುಂಬೈ ನಡುವೆ ನಿತ್ಯ 70 ಟ್ರಿಪ್

ಪ್ರಸ್ತುತ ಈ ಮಾರ್ಗದಲ್ಲಿ ಓಡುವ ರೈಲು ಸಬರಮತಿ-ಮುಂಬೈನ ಈ ದೂರವನ್ನು ಕ್ರಮಿಸಲು ಸುಮಾರು 7 ಗಂಟೆ ತೆಗೆದುಕೊಳ್ಳುತ್ತದೆ. ವಿಮಾನ ಪ್ರಯಾಣಕ್ಕೆ ಒಂದು ಗಂಟೆ ಸಾಕಾಗುತ್ತದೆ.

ಪ್ರಧಾನಿ ನರೇಂದ್ರಮೋದಿ ಹಾಗೂ ಜಪಾನ್ ಪ್ರಧಾನಿ ಶಿಂಜೊಅಬೆ ಶಿಲಾನ್ಯಾಸ ನೆರವೇರಿಸಿದ ದೇಶದ ಮೊದಲ ಮತ್ತು ಮಹತ್ವಾಕಾಂಕ್ಷೆಯ ಬುಲೆಟ್ ರೈಲು ಯೋಜನೆ ನಿಗದಿತ ಅವಧಿಗಿಂತ ಮುನ್ನವೇ ಹಳಿಯೇರಲು ಸಿದ್ಧತೆ ನಡೆಸಿದೆ.

## ಯೋಜನೆಯ ಹೈಲೈಟ್ಸ್

- ಸೆ.14.2017ರಂದು ಶಿಲಾನ್ಯಾಸ
- ಜೂನ್ 2018ಕ್ಕೆ ಸಿವಿಲ್ ಕಾಮಗಾರಿ
- 21 ಕಿಮೀ ಉದ್ದದ ಸುರಂಗ ಮಾರ್ಗ
- ಶೇ92ರಷ್ಟು ಕ್ರಮಿಸುವ ಮೇಲ್ಸೇತುವೆ
- 7 ಕಿ.ಮೀ ಸಮುದ್ರದೊಳಗೆ ಮಾರ್ಗ
- ಆ.15,2022ಕ್ಕೆ ಕಾರ್ಯಾರಂಭ ಗುರಿ
- 2013 ಈ ಮೊದಲು ನೀಡಿದ್ದ ಗಡುವು
- ಯೋಜನೆ ವೆಚ್ಚ 1.1. ಲಕ್ಷ ಕೋಟಿ ರೂ
- 508 ಕಿಮೀ ಅಂತರದ ರೈಲು ಮಾರ್ಗ
- ಪ್ರಯಾಣಕ್ಕೆ ತಗಲುವ ಸಮಯ 2 ಗಂಟೆ
- ಮಾರ್ಗದ ಒಟ್ಟು ನಿಲ್ದಾಣಗಳ ಸಂಖ್ಯೆ 12
- ಗಂಟೆಗೆ 320 ಕಿಮೀ ವೇಗದಲ್ಲಿ ಸಂಚಾರ

The progress of Bullet Train work is taking fast.

(9)

विजयवाणी / हूबल्लि
Vijay Vani/ Hubli

31.MAR 2018

# ಅಹಮದಾಬಾದ್‌ನಿಂದ ಮುಂಬೈಗೆ ಎರಡೇ ತಾಸು!

## 2022 ಆ.15ಕ್ಕೆ ಬುಲೆಟ್ ರೈಲು ಸಂಚಾರ

- 750 ಆಸನದ ರೈಲು (ನಂತರದಲ್ಲಿ 1,250ಕ್ಕೆ ಏರಿಕೆ)
- 350 ಕಿ.ಮೀ ತಾಸಿಗೆ ಗರಿಷ್ಠ ವೇಗ ಸಾಮರ್ಥ್ಯ
- 2 ಗಂಟೆ 58 ನಿಮಿಷ ಬುಲೆಟ್ ರೈಲಿನ ಪ್ರಯಾಣ ಅವಧಿ
- 21 ಕಿ.ಮೀ ಬೋಯಿಸಾರ್-ಬಿಕೆಸಿ ಮಧ್ಯೆಯ ಸುರಂಗದ ಉದ್ದ
- 2018 ಜೂನ್ ಯೋಜನೆಯ ಕಾಮಗಾರಿ ಆರಂಭ
- 2022ರ ಆಗಸ್ಟ್ 15 ಬುಲೆಟ್ ರೈಲು ಕಾರ್ಯಾರಂಭದ ಗಡುವು



ಅಹಮದಾಬಾದ್: ಪ್ರಧಾನಿ ನರೇಂದ್ರ ಮೋದಿ ಮಹತ್ವಾಕಾಂಕ್ಷೆಯ ಬುಲೆಟ್ ರೈಲು ಗುಜರಾತ್‌ನ ಅಹಮದಾಬಾದ್ ಮತ್ತು ಮಹಾರಾಷ್ಟ್ರದ ಮುಂಬೈ ಮಧ್ಯೆ ತಡೆರಹಿತವಾಗಿ 2 ತಾಸು 7 ನಿಮಿಷದಲ್ಲಿ ಸಂಚರಿಸಲಿದೆ! ಮಾರ್ಗ ಮಧ್ಯೆ 12 ನಿಲ್ದಾಣಗಳಿದ್ದು, ಎಲ್ಲ ನಿಲ್ದಾಣಗಳಲ್ಲಿ ನಿಲುಗಡೆ ಮಾಡಿದರೂ 2 ಗಂಟೆ 58 ನಿಮಿಷದಲ್ಲಿ ಪ್ರಯಾಣ ಪೂರ್ಣಗೊಳಿಸಲಿದೆ. ಪ್ರತಿದಿನ ಎರಡೂ ಬದಿಯಿಂದ ತಲಾ 35, ಒಟ್ಟಾರೆ 70 ಟ್ರಿಪ್ ನಂತೆ ರೈಲು ಸಂಚರಿಸಲಿದೆ.

ಸಂಚಾರ ಒತ್ತಡ ಇರುವ ಸಮಯದಲ್ಲಿ (ಪಿಕ್ ಅವರ್ ಬೆಳಗ್ಗೆ 7ರಿಂದ 10 ಮತ್ತು ಸಂಜೆ 5ರಿಂದ ರಾತ್ರಿ 9) ಪ್ರತಿ ತಾಸಿಗೆ 3 ರೈಲು ಅಂದರೆ 20 ನಿಮಿಷಕ್ಕೆ ಒಂದರಂತೆ ರೈಲುಗಳು ಸಂಚರಿಸಲಿವೆ. ಉಳಿದ ಅವಧಿಯಲ್ಲಿ ಅರ್ಧ ತಾಸಿಗೆ ಒಂದು ರೈಲು ಸಂಚರಿಸಲಿವೆ. ಆರಂಭದ ಕೆಲವು ದಿನ ಪ್ರತಿ ರೈಲಿನಲ್ಲಿ 750 ಪ್ರಯಾಣಿಕರಿಗೆ ಅವಕಾಶ ಆಗಲಿದ್ದು, ನಂತರ ಆಸನದ ಸಾಮರ್ಥ್ಯ 1,250ಕ್ಕೆ ಹೆಚ್ಚಳವಾಗಲಿದೆ.

### ಯಾವಾಗ ಸಂಚಾರ?

ಜಪಾನ್ ಸಹಯೋಗದ ಬುಲೆಟ್ ರೈಲು ಯೋಜನೆಯ ಕಾಮಗಾರಿ ಮುಂದಿನ ಜೂನ್‌ನಲ್ಲಿ ಆರಂಭವಾಗಲಿದ್ದು, 75ನೇ ಸ್ವಾತಂತ್ರ್ಯ ದಿನಾಚರಣೆಯ ವೇಳೆ (2022ರ ಆಗಸ್ಟ್ 15ಕ್ಕೆ) ರೈಲು ಸಂಚಾರ ಆರಂಭವಾಗುವ ನಿರೀಕ್ಷೆಯಿದೆ.

### ಭೂಸ್ವಾಧೀನ ಶುರು

ಯೋಜನೆಗೆ ಸಾಬರಮತಿ ಹಳೆಯ ಮತ್ತು ಹೊಸ ರೈಲು ನಿಲ್ದಾಣದ ಮಧ್ಯೆ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಲು ರಾಷ್ಟ್ರೀಯ ಹೈಸ್ಪೀಡ್ ರೈಲ್ವೆ ಕಾರ್ಪೊರೇಷನ್ (ಎನ್‌ಎಚ್‌ಎಸ್ ಆರ್‌ಸಿ) ನಿರ್ಧರಿಸಿದೆ.

### ಸಾಮಾನ್ಯ ರೈಲುಗಳಿಗೆ 7 ತಾಸು ಬೇಕು!

ಅಹಮದಾಬಾದ್- ಮುಂಬೈ ನಡುವಿನ ಸುಮಾರು 500 ಕಿ.ಮೀ ದೂರವನ್ನು ಪ್ರಸ್ತುತ ರೈಲುಗಳು ಸರಾಸರಿ 7 ತಾಸುಗಳಲ್ಲಿ ಕ್ರಮಿಸುತ್ತಿವೆ. ಈ ಎರಡು ನಗರಗಳ ಮಧ್ಯೆ ಸದ್ಯ 20 ರೈಲುಗಳು ನಿತ್ಯ ಸಂಚರಿಸುತ್ತವೆ. ಅಹಮದಾಬಾದ್- ಮುಂಬೈ ನಡುವಿನ ವಿಮಾನದ ಪಯಣದ ಅವಧಿ ಒಂದು ತಾಸು. ನಿತ್ಯ 10 ವಿಮಾನಗಳು ಹಾರಾಟ ಮಾಡುತ್ತವೆ.

---

उदय वाणी / मणिपाल
UDAY VANI/MANIPAL

31.MAR 2018

ಅಹಮದಾಬಾದ್-ಮುಂಬೈ ಮಧ್ಯೆ 70 ಟ್ರಿಪ್

# 20 ನಿಮಿಷಕ್ಕೊಂದು ಬುಲೆಟ್ ರೈಲು



ಅಹಮದಾಬಾದ್: ಅಹಮದಾಬಾದ್ -ಮುಂಬೈ ಬುಲೆಟ್ ಟ್ರೇನ್ ಯೋಜನೆಯಡಿ ಮಹತ್ವದ ಹೆಜ್ಜೆಯಿಟ್ಟಿರುವ ರಾಷ್ಟ್ರೀಯ ಹೈಸ್ಪೀಡ್ ರೈಲ್ವೆ ಕಾರ್ಪೊರೇಶನ್ ಲಿಮಿಟೆಡ್, ದಿನಕ್ಕೆ 35 ರೈಲುಗಳು ಈ ಎರಡೂ ರೈಲ್ವೆ ನಿಲ್ದಾಣಗಳ ಮಧ್ಯೆ ಚಲಿಸುವುದಾಗಿ ಹೇಳಿದೆ.

ಬುಲೆಟ್ ರೈಲು ಅಹಮದಾಬಾದ್‌ನ ಸಾಬರಮತಿರೈಲ್ವೆಸ್ಟೇಷನ್‌ನಿಂದಆರಂಭವಾಗಿ, ಮುಂಬೈನ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್‌ನಲ್ಲಿ ಕೊನೆಗೊಳ್ಳಲಿದೆ. ಪ್ರಸ್ತುತ ಹಳೆಯ ಮತ್ತು ಹೊಸ ಸಾಬರಮತಿ ರೈಲ್ವೆ ಸ್ಟೇಷನ್ ಮಧ್ಯೆ ಇರುವ ಜಾಗವನ್ನು ಸ್ವಾಧೀನ ಪಡಿಸಿಕೊಳ್ಳಲು ಆರಂಭಿಸಿದೆ. ಈ ಪ್ರದೇಶದಲ್ಲಿ ಎತ್ತರಿಸಿದ ಸ್ಟೇಷನ್ ಅನ್ನು ಬುಲೆಟ್ ರೈಲು ಮಾರ್ಗಕ್ಕಾಗಿ ನಿರ್ಮಿಸಲಾಗುತ್ತದೆ. ಸಾಬರಮತಿ ನಿಲ್ದಾಣ ದಿಂದ ಬುಲೆಟ್ ರೈಲು ಆರಂಭವಾ ಗಲಿದ್ದು, ಕಾನ್ಪುರ ಎರಡನೇ ನಿಲ್ದಾಣ ವಾಗಿರಲಿದೆ. ಮುಂಬೈನ ಬಾಂದ್ರಾ ಕುರ್ಲಾದಿಂದ ಸಾಬರಮತಿಯವರೆಗೆ 12 ನಿಲ್ದಾಣಗಳನ್ನು ನಿರ್ಮಿಸಲಾಗುತ್ತಿದೆ.

ರೈಲು ಯಾವುದೇ ನಿಲ್ದಾಣದಲ್ಲಿ ನಿಲ್ಲಿಸದೇ ನೇರವಾಗಿ ಚಲಿಸಿದರೆ 2.07 ಗಂಟೆಯಲ್ಲಿ ಗಮ್ಯವನ್ನು ತಲುಪಬಹುದಾಗಿದ್ದು, ಎಲ್ಲ 12 ನಿಲ್ದಾಣಗಳಲ್ಲಿ ರೈಲು ನಿಂತಲ್ಲಿ ಪ್ರಯಾಣ ಅವಧಿ 2.58 ಗಂಟೆ. ಸದ್ಯ ರೈಲುಗಳು 7 ಗಂಟೆ ತೆಗೆದು ಕೊಳ್ಳುತ್ತಿದ್ದು, ವಿಮಾನದ ಮೂಲಕ ಒಂದು ಗಂಟೆಯಲ್ಲಿ ತಲುಪಬಹುದಾಗಿದೆ.

ಬೆಳಗ್ಗೆ 7 ರಿಂದ 10 ಗಂಟೆ ಹಾಗೂ ಸಂಜೆ 5 ರಿಂದ 9 ಗಂಟೆಯ ಅವಧಿಯಲ್ಲಿ ಪ್ರತಿ 20 ನಿಮಿಷಕ್ಕೆ ಒಂದು ರೈಲು ಸಂಚರಿಸಲಿದೆ. ಉಳಿದ ಸಮಯದಲ್ಲಿ ಗಂಟೆಗೆ 2 ರೈಲು ಸಂಚರಿಸಲಿವೆ. ದಿನವೊಂದಕ್ಕೆ ಒಟ್ಟು 35 ರೈಲುಗಳು ಸಂಚರಿಸಲಿವೆ. ಅಂದರೆ ಒಟ್ಟು 70 ಟ್ರಿಪ್. 750 ಪ್ರಯಾಣಿಕರನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿರಲಿದೆ. ಮುಂದಿನ ದಿನಗಳಲ್ಲಿ ಇದನ್ನು 1250ಕ್ಕೆ ಏರಿಸಲಾಗುತ್ತದೆ. ಬುಲೆಟ್ ರೈಲು ಗಂಟೆಗೆ ಗರಿಷ್ಠ 350 ಕಿ.ಮೀ ವೇಗ ಹೊಂದಿರಲಿದೆ.

Same about Page no.

10

टाइम्स आफ इंडिया/बेंगलूर
THE TIMES OF INDIA/BANGALORE
31 MAR 2018

# Over 2 crore candidates apply for 90k rly jobs

New Delhi: The Indian Railways has received over 2.12 crore applications for about one lakh jobs, an official said on Friday. "The Railway Recruitment Board advertised for the positions last month. Since then over 2.12 crore aspirants have filed online applications from across the country," the official said.

The last date for applying for the jobs is March 31.

The railways currently employs over 13.5 lakh people and is one of the biggest government employers.

The ministry had invited online applications for one lakh posts in Group C Level 1 (erstwhile Group D) like track maintainer, points man, helper, gateman and porter and Group C Level 2



categories like assistant loco pilots and technicians through Railway Recruitment Boards websites. On February 19, the ministry relaxed upper age limit by 2 years for all categories.

"The railways will invite applications for over 9,100 posts in Railway Protection Force (RPF) and Railway Protection Special Force (RPSF) between May 19 and 25 this year," the official said. These jobs in the RPF would be mainly for women. "Currently there are about 2,400 women RPF personnel. After the recruitment, the strength of women personnel would go up to 6,900," the official added. IANS

संयुक्त कर्नाटक/हुबली
SAMYUKTHA KARNATAKA/HUBLI.
31 MAR 2018

## ರೈಲ್ವೇಯಲ್ಲಿ ನೌಕರಿ ಆಕಾಂಕ್ಷಿಗಳ ಮಹಾಪೂರ

ನವದೆಹಲಿ : ಭಾರತೀಯ ರೈಲ್ವೇಯಲ್ಲಿ ಕರೆದಿರುವ ವಿವಿಧ ದರ್ಜೆಯ 90 ಸಾವಿರ ಹುದ್ದೆಗಳಿಗೆ 2.5 ಕೋಟಿಗೂ ಅಧಿಕ ಮಂದಿ ಆಕಾಂಕ್ಷಿಗಳು ಅರ್ಜಿ ಸಲ್ಲಿಸಿದ್ದಾರೆ. ಇದೇ ಮೊದಲ ಬಾರಿಗೆ ಈ ಪ್ರಮಾಣದಲ್ಲಿ ಅರ್ಜಿ ಬಂದಿದ್ದು ಇದು ಆಸ್ಟ್ರೇಲಿಯಾ ದೇಶದ ಜನಂಖ್ಯೆಗೂ ಅಧಿಕವಾಗಿರುವುದು ವಿಶೇಷವಾಗಿದೆ.

ಕನ್ನಡ ಪ್ರಭ / ಬೆಳಗಾಂ
KANNADA PRABHA/BELGAUM
31 MAR 2018

## 90 ಸಾವಿರ ರೈಲ್ವೆ ಉದ್ಯೋಗಗಳಿಗೆ 2.5 ಕೋಟಿ ಅರ್ಜಿ!

ನವದೆಹಲಿ: ಭಾರತೀಯ ರೈಲ್ವೆ ತನ್ನ 90000 ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದ್ದು, 2.5 ಕೋಟಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ಇದು ಆಸ್ಟ್ರೇಲಿಯಾ ಜನಸಂಖ್ಯೆಗಿಂತ ಹೆಚ್ಚು ಎಂಬುದು ಅಚ್ಚರಿಯ ಸಂಗತಿ. ವಿವರ ↘ 8

ಕನ್ನಡ ಪ್ರಭ / ಬೆಳಗಾಂ
KANNADA PRABHA/BELGAUM
30 MAR 2018

20,000 more posts in Railway

## ರೈಲ್ವೆಯಲ್ಲಿ ಮತ್ತೆ 20,000 ಹೆಚ್ಚುವರಿ ಹುದ್ದೆಗೆ ಆಹ್ವಾನ

ನವದೆಹಲಿ: ಈಗಾಗಲೇ 90,000 ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಿದ್ದ ರೈಲ್ವೆ ಇಲಾಖೆ, ಇದೀಗ ಮತ್ತೆ 20,000 ಹೆಚ್ಚುವರಿ ನೇಮಕಾತಿಯ ಅರ್ಜಿ ಆಹ್ವಾನಿಸಿದೆ ಎಂದು ರೈಲ್ವೆ ಸಚಿವ ಪಿಯುಷ್ ಗೋಯಲ್ ಹೇಳಿದ್ದಾರೆ. ಈ ಮೂಲಕ ಪ್ರಸ್ತುತ ರೈಲ್ವೆ ಇಲಾಖೆಯ ಒಟ್ಟು ಖಾಲಿ ಹುದ್ದೆಗಳ ಸಂಖ್ಯೆ 1,10,000ಕ್ಕೆ ಏರಿಕೆಯಾಗಿದೆ. 90,000 ಹುದ್ದೆಗಳಿಗೆ ಈಗಾಗಲೇ 2 ಕೋಟಿಗೂ ಅಧಿಕ ಅರ್ಜಿಗಳು ಬಂದಿವೆ. ರೈಲ್ವೆ ಪೊಲೀಸ್ ಪಡೆ ಮತ್ತು ರೈಲ್ವೆ ಸುರಕ್ಷತಾ ವಿಶೇಷ ಪಡೆಯಲ್ಲಿ 9,000 ಹುದ್ದೆಗಳಿದ್ದು, ಇತರ 10,000ಕ್ಕೂ ಅಧಿಕ ಹೆಚ್ಚುವರಿ ಉದ್ಯೋಗಗಳಿವೆ ಎಂದು ಅವರು ವಿವರಿಸಿದ್ದಾರೆ.

ಕನ್ನಡ ಪ್ರಭ / ಬೆಳಗಾಂ
KANNADA PRABHA/BELGAUM
31 MAR 2018

**ನೇಮಕ** ಇದು ಆಸ್ಟ್ರೇಲಿಯಾ ಜನರಿಗಿಂತ ಹೆಚ್ಚು

## 90 ಸಾವಿರ ರೈಲ್ವೆ ಹುದ್ದೆಗೆ 2.5 ಕೋಟಿ ಜನರ ಅರ್ಜಿ!

ನವದೆಹಲಿ: ಭಾರತೀಯ ರೈಲ್ವೆ ಇತ್ತೀಚೆಗೆ 90000 ವಿವಿಧ ಹುದ್ದೆಗಳಿಗೆ ಅರ್ಹರಿಂದ ಅರ್ಜಿ ಆಹ್ವಾನಿಸಿತ್ತು. ಈ ಹುದ್ದೆಗಳಿಗೆ ಭಾರೀ ಪ್ರತಿಕ್ರಿಯೆ ವ್ಯಕ್ತವಾಗಿದ್ದು 2.5 ಕೋಟಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ವಿಶೇಷವೆಂದರೆ ಹೀಗೆ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಆಸ್ಟ್ರೇಲಿಯಾದ ಒಟ್ಟು ಜನಸಂಖ್ಯೆಗಿಂತಲೂ ಹೆಚ್ಚು. ಆಸ್ಟ್ರೇಲಿಯಾದ ಜನಸಂಖ್ಯೆ 2.41 ಕೋಟಿ ಇದೆ.



ರೈಲ್ವೆ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನೇಮಕಾತಿಗೆ ರೈಲ್ವೆ ಇಲಾಖೆ ಅರ್ಜಿ ಆಹ್ವಾನಿಸಲಾಗಿತ್ತು. ಹೀಗಾಗಿ ಇದು ವಿಶ್ವದ ಅತಿದೊಡ್ಡ ನೇಮಕಾತಿ ಎಂಬ ಹಿರಿಮೆಗೂ ಪಾತ್ರವಾಗಿತ್ತು.

ಈ ಬಾರಿ ಹಿಂದಿ, ಇಂಗ್ಲೀಷ್ ಸೇರಿ ಒಟ್ಟು 15 ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ.

ಹಾಲಿ ರೈಲ್ವೆಯಲ್ಲಿ 13 ಲಕ್ಷ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ಜೊತೆಗೆ ಮತ್ತೆ 90000 ಜನ ಸೇರಿಕೊಳ್ಳಲಿದ್ದಾರೆ. ಅರ್ಜಿ ಸಲ್ಲಿಸಿದವರ ಪೈಕಿ 2.4 ಕೋಟಿ ಜನರಿಗೆ ರೈಲ್ವೆಯಲ್ಲಿ ಈ ಬಾರಿ ಉದ್ಯೋಗ ಸಿಗುವುದಿಲ್ಲ ಎಂಬುದೂ ದಿಟ.

डेक्कन हेराल्ड / हुबली
DECCAN HERALD/HUBLI.
31 .MAR 2018

# Special trains to Ooty

Chugging up your way up the picturesque Nilgiri mountain with the Nilgiri Mountain Railways will turn more special during the weekends beginning from Saturday, reports *DHNS* from Chennai.

The Nilgiri Mountain Railways (NMR) that operates mountain trains from Mettupalayam to Ooty will introduce summer special services on weekends. The mountain train that travels through deep valleys and long tunnels carved out of the mountains is quite popular among tourists who flock to Nilgiris to beat the summer heat.

This unique Meter Gauge section, which has been conferred with Heritage status by UNESCO, runs on 'Rack and Pinion System' through the virgin hills of Western Ghats. Titled "Heritage Steam Nilgiri Summer Special Trains", the special trains will be run between Mettupalayam – Coonoor from March 31 to June 24, 2018.

Senior officials said the Southern Railway has made elaborate arrangements to make this travel a pleasant memory for lifetime with Value Added Services such as a Welcome Kit, a Souvenir and onboard refreshments.

टाइम्स आफ इंडिया/बेंगलूर
THE TIMES OF INDIA/BANGALORE
31 .MAR 2018

# Luxury train fares set to become 20% cheaper

**Siddharth.Prabhakar**
@timesgroup.com

**Chennai:** Luxury trains in the country have long been plagued by poor patronage owing to prohibitive ticket prices. But this could soon change as they are set to be easier on the pocketbook by at least 20%, say officials.

The Railway Board has directed that the tariff for luxury trains like the Maharajas' Express and Palace on Wheels be reduced. In an order on March 1, the Board directed zonal railways to decrease their haulage charge by 50%. Haulage charge is the tariff collected by zonal railways for transportation of the train. Senior officials say it is the biggest cost as far as these luxury tourist trains are concerned and a 50% drop will bring about a decrease in the tariff for passengers.

Indian Railways runs five luxury trains, including the Maharajas' Express, Golden Chariot, Royal Rajasthan on Wheels, Deccan Odyssey and Palace on Wheels.

The move comes after deliberations between the IRCTC (Indian Railway Catering and Tourism Corporation) and Indian Railways over the haulage charge. Officials said IRCTC had requested for a drop in the charge. In May 2017, IRCTC had announced the 'southern sojourn' for the Maharajas' Express, with an itinerary through Karaikudi, Mahabalipuram, Hampi, Goa and Trivandrum. But it was a non-starter as there were only 18 bookings on the Trivandrum-Mumbai leg and none on the return leg.

Pricing, which ranged from Rs 3.77 lakh to Rs 17.33 lakh for an eight-day, seven-night trip, was considered to be the reason for the flop show. This included food and beverages, sight-seeing and stay in five-star like facilities on the train. Usually patronised by foreigners, the package was targeted at high-end clients in India who have the capacity to pay for such a unique experience, said railway officials. A recent parliamentary standing committee report stated that these luxury tourist trains had only 30% occupancy and many seats were given to railway officials on a complimentary basis to travel for free.

(12)

विजय कर्नाटक/हुबली
VIJAYA KARNATAKA/HUBLI.
31 MAR 2018

## ರೈಲ್ವೆ ಇಲಾಖೆಗೆ ಅರ್ಜಿ ಸಲ್ಲಿಸಲು ರಾಜಧಾನಿಗೆ ಬಂದ ನಿರುದ್ಯೋಗಿಯ ಪ್ರಶ್ನೆ

# ಚುನಾವಣೆ ಹೊತ್ತಲ್ಲಾದ್ರೂ ನೌಕ್ರಿ ಸಿಗಬಹುದೇ?




### ರೈಲ್ವೆಯಲ್ಲಿ ಖಾಲಿಯಿರುವ 1ಲಕ್ಷ ಹುದ್ದೆಗಳಿಗೆ 2 ಕೋಟಿ ಅಭ್ಯರ್ಥಿಗಳು ಅರ್ಜಿ

■ **ವಿಕ ಎಲೆಕ್ಷನ್ ಡೆಸ್ಕ್** ಬೆಂಗಳೂರು

''ಏನೋ, ರೈಲ್ವೆಯಲ್ಲಿ ನೌಕರಿ ಸಿಗುತ್ತೆ ಎಂದು ಅರ್ಜಿ ಹಾಕಿದ್ದೇನೆ ಸಾರ್. ಎಲೆಕ್ಷನ್ ಬರ್ತಾ ಇದೆಯಲ್ಲಾ, ರಾಜಕಾರಣಿಗಳನ್ನು ಹಿಡಿದರೆ, ನೌಕ್ರಿ ಸಿಗಬಹುದು ಎಂಬ ವಿಶ್ವಾಸ. ಆದ್ರೆ, ಇಲ್ಲಿ ನೋಡಿದ್ರೆ 1 ಸೀಟಿಗೆ ಇನ್ನೂರು-ಮುನ್ನೂರು ಜನ ಅರ್ಜಿ ಹಾಕಿದ್ದಾರಂತೆ. ನೌಕ್ರಿ ಸಿಗುತ್ತೋ, ಇಲ್ವೋ ಗೊತ್ತಿಲ್ಲ....,''

- ಇದು ಮೈಸೂರು ಜಿಲ್ಲೆ ವರುಣಾ ವಿಧಾನ ಸಭೆ ಕ್ಷೇತ್ರದ 28ರ ಯುವಕ ಹರೀಶನ ಬೇಸರ ಮಾತು. ರೈಲ್ವೆ ಇಲಾಖೆಯಲ್ಲಿ ನೌಕರಿಗೆ ಅರ್ಜಿ ಸಲ್ಲಿಸಿರುವ ಆತನಿಗೆ, ನೌಕರಿ ಬಗ್ಗೆ ದೊಡ್ಡ ವಿಶ್ವಾಸವೇನಿಲ್ಲ. ಆದ್ರೆ, ಎಲೆಕ್ಷನ್ ಹೊತ್ತಲ್ಲಿ, ತನ್ನೂರು ಮುಖ್ಯಮಂತ್ರಿ ಮನಸ್ಸು ಮಾಡಿದ್ರೆ, ಏನಾದ್ರೂ ಆಗಬಹುದು ಎಂಬ ಸಣ್ಣ ಭರವಸೆ. ರೈಲ್ವೆ ಕೇಂದ್ರ ಸರಕಾರದ ಅಧೀನದಲ್ಲಿರುವ ಬರುವ ವ್ಯವಸ್ಥೆ ಎಂಬುದು ಕೂಡ ಆತನಿಗೆ ಗೊತ್ತಿಲ್ಲ. ಇದು ಆತನೊಬ್ಬನ ಕತೆಯಲ್ಲ. ರೈಲ್ವೆ ಇಲಾಖೆಯಲ್ಲಿ ಖಾಲಿ ಇರುವ 1ಲಕ್ಷ ಹುದ್ದೆಗಳಿಗೆ 2 ಕೋಟಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ಆನ್‌ಲೈನ್ ನೋಂದಣಿಗೆ ಇನ್ನೂ ಐದು ದಿನ ಬಾಕಿ ಇದ್ದು ಅರ್ಜಿಗಳ ಸಂಖ್ಯೆ ಇನ್ನೂ ಏರುವ ಸಾಧ್ಯತೆ ಇದ್ದೇ ಇದೆ. ಒಂದು ಹುದ್ದೆಗೆ 200ಕ್ಕಿಂತ ಹೆಚ್ಚು ಆಕಾಂಕ್ಷಿಗಳು ಸಾಲುಗಟ್ಟಿ ನಿಲ್ಲುತ್ತಿದ್ದಾರೆ ಎಂದರೆ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಎಷ್ಟು ಗಂಭೀರವಾಗಿದೆ ಎಂಬುದು ಅರಿವಾಗುತ್ತದೆ. ಒಂದೆಡೆ ತಂತ್ರಜ್ಞಾನ ಉದ್ಯೋಗವಕಾಶಗಳ ವ್ಯಾಪ್ತಿಯನ್ನು ಕುಗ್ಗಿಸಿದ್ದರೆ, ಸರಕಾರ ಕೂಡ ಇರುವ ಉದ್ಯೋಗಗಳಿಗೆ ಕತ್ತರಿ ಹಾಕುತ್ತಿದೆ. ವೇತನ ಆಯೋಗಗಳು ಸರಕಾರಿ ಉದ್ಯೋಗಿಗಳ ಸಂಬಳವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಿರುವುದು ಹಾಗೂ ಸಾಮರ್ಥ್ಯ ಆಧಾರಿತ ಕುಶಲ ಕೆಲಸಗಾರರ ಅವಶ್ಯಕತೆಯಿಂದ ಹಲವು ರಾಜ್ಯಗಳು ಗುತ್ತಿಗೆ ಪದ್ಧತಿಗೆ ಮೊರೆ ಹೋಗಿವೆ.

ಖಾಸಗಿ ವಲಯದಲ್ಲಿ ಉದ್ಯೋಗಗಳು ಸೃಷ್ಟಿಯಾಗುತ್ತಿಲ್ಲ.ಈ ವಲಯದಲ್ಲಿ ತುಂಬ ಅನಿಶ್ಚಿತತೆ ಮನೆ ಮಾಡಿದೆ. ಹೀಗಾಗಿ ಸರಕಾರಿ ಹುದ್ದೆಗಳಿಗೆ ಯುವಕ ಯುವತಿಯರು ಮುಗಿಬೀಳುತ್ತಿದ್ದಾರೆ. ಸ್ವಯಂ ಉದ್ಯೋಗಕ್ಕೆ ಉತ್ತೇಜನ ನೀಡಲು ಸಾಲ ನೀತಿಯನ್ನು ಸರಕಾರ ಸರಳಗೊಳಿಸಿದ್ದರೂ ಉದ್ಯೋಗ ಬಿಕ್ಕಟ್ಟು ಕಡಿಮೆಯಾಗುವ ಯಾವ ಲಕ್ಷಣಗಳು ಗೋಚರಿಸುತ್ತಿಲ್ಲ.

ಪ್ರಾತಿನಿಧಿಕ ಚಿತ್ರ




ಅಭಿಮತ

### ಮೊದಲು ಉದ್ಯೋಗ ಕೊಡಿ!

ಈ ಬಾರಿಯ ಚುನಾವಣೆ ಉದ್ಯೋಗ, ಕೃಷಿಬಿಕ್ಕಟ್ಟು ಮತ್ತು ದೇಶದ ಅಭಿವೃದ್ಧಿಯಂತಹ ಜನರ ನೈಜ ಸಮಸ್ಯೆಗಳ ಆಧಾರದಲ್ಲಿ ನಡೆಯಬೇಕು. ಆದರೆ ಎಲ್ಲ ರಾಜಕೀಯ ಪಕ್ಷಗಳು ಜಾತಿ, ಧರ್ಮ, ಹಣ, ಆಮಿಷ ಮತ್ತು ಇತರ ಭಾವನಾತ್ಮಕ ವಿಚಾರದ ಮೇಲೆ ಚುನಾವಣೆ ಎದುರಿಸಲು ಹೊರಟಿವೆ. ಇದು ಸಂವಿಧಾನ ಮತ್ತು ಪ್ರಜಾಪ್ರಭುತ್ವ ವಿರೋಧಿಯಾದುದ್ದು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಉದ್ಯೋಗದ ವಿಚಾರವನ್ನು ನಾವು ಪ್ರಶ್ನಿಸಬೇಕಿದೆ. ಇದಕ್ಕಾಗಿ ಆಂದೋಲನವನ್ನೇ ಮಾಡಬೇಕಿದೆ. ಉದ್ಯೋಗದ ಆಂದೋಲನವು ದೇಶದ ಅರ್ಧದಷ್ಟು ಜನರನ್ನು ಒಳಗೊಳ್ಳುತ್ತದೆ. ಮುಖ್ಯವಾಗಿ ಯುವಜನರನ್ನು ಒಳಗೊಳ್ಳುತ್ತದೆ. ಜಾತಿ ಧರ್ಮ ಮೀರಿದ ಸೆಕ್ಯೂಲರ್ ವಿಷಯವಾಗಿದೆ. ಎಲ್ಲಾ ರಾಜಕೀಯ ಪಕ್ಷಗಳನ್ನು ಮತ್ತು ಅವುಗಳ ಆರ್ಥಿಕ ನೀತಿಗಳನ್ನು ಇದು ಪ್ರಶ್ನಿಸುತ್ತದೆ. ಯುವಜನರಿಗೆ ಕುರುಡಾಗಿ ಅನುಸರಿಸುವುದನ್ನು ಬಿಟ್ಟು ಉದ್ಯೋಗ ನೀಡಿ ಎಂದು ಪ್ರಶ್ನಿಸಬೇಕಿದೆ.

**-ರವಿನಾರಾಯಣ್**, ಬೆಂಗಳೂರು



### ಒಂದು ಹುದ್ದೆಗೆ 200ಕ್ಕಿಂತ ಹೆಚ್ಚು ಆಕಾಂಕ್ಷಿಗಳು

### ಉದ್ಯೋಗ ಸೃಷ್ಟಿಸದ ಸರಕಾರ

ಉದ್ಯೋಗ ನಿರ್ಮಾಣ ಪ್ರಧಾನಿ ನರೇಂದ್ರ ಮೋದಿ ಅವರ ಪಾಲಿಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಲೋಕಸಭೆ ಚುನಾವಣೆಗೆ ಇನ್ನು ಒಂದೇ ಒಂದು ವರ್ಷ ಬಾಕಿ ಇದ್ದು ಮರಳಿ ಅವರು ಜನತೆಯ ಮುಂದೆ ಹೋಗಬೇಕಾಗಿದೆ. 2014ರ ಲೋಕಸಭೆ ಚುನಾವಣೆ ಪ್ರಚಾರದ ಸಂದರ್ಭದಲ್ಲಿ ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ವರ್ಷಕ್ಕೆ ಒಂದು ಕೋಟಿ ಉದ್ಯೋಗ ನಿರ್ಮಿಸುವುದಾಗಿ ಭರವಸೆ ನೀಡಿದ್ದರು. ಉದ್ಯೋಗಗಳು ಹೆಚ್ಚು ಸೃಷ್ಟಿಯಾಗುವುದಿರಲಿ, ಉದ್ಯೋಗ ಎಂಬುದು ಗುತ್ತಿಗೆ ಆಧಾರಿತವಾಗುತ್ತಿದೆ ಎನ್ನುತ್ತದೆ ಸಮೀಕ್ಷೆಯೊಂದರ ವರದಿ.

ಇತ್ತ ರಾಜ್ಯ ಸರಕಾರವೂ ಉದ್ಯೋಗ ಸೃಷ್ಟಿಗೆ ಒತ್ತು ನೀಡಿಲ್ಲ. ಗ್ರಾಮೀಣ ಪ್ರದೇಶದಲ್ಲಿ ವರ್ಷಕ್ಕೆ ಕನಿಷ್ಠ 100 ದಿನ ಉದ್ಯೋಗ ಕಲ್ಪಿಸುವ ಮನರೇಗಾ ಕೂಡ ರಾಜ್ಯದಲ್ಲಿ ಆಶಾದಾಯಕವಾಗಿಲ್ಲ. ಪ್ರತಿ ವರ್ಷ ಉದ್ಯೋಗ ಮಾರುಕಟ್ಟೆಗೆ ಕೋಟ್ಯಂತರ ಜನ ಬರುತ್ತಿದ್ದಾರೆ. ಇವರಲ್ಲಿ ಬಹುತೇಕರು ಅಕುಶಲಿಗಳು ಹಾಗೂ ಉದ್ಯೋಗಶೀಲತೆಯೇ ಇಲ್ಲದವರು. ಯಾಂತ್ರೀಕರಣ (ಆಟೋಮೇಷನ್) ಹಾಗೂ ಕೃತಕ ಬುದ್ಧಿಮತ್ತೆಯಂಥ ತಂತ್ರಜ್ಞಾನ ಹಲವು ವಲಯಗಳಲ್ಲಿ ಉದ್ಯೋಗಗಳನ್ನು ಆಪೋಶನ ತೆಗೆದುಕೊಂಡಿದೆ.ಅರೆ ಕುಶಲ ಮತ್ತು ಕೌಶಲ್ಯ ರಹಿತ ಕಾರ್ಮಿಕರು ಭಾರತದ ಪಾಲಿಗೆ ದೊಡ್ಡ ಕಂಟಕವಾಗುತ್ತಿದೆ. ಈ ಸಮಸ್ಯೆಯನ್ನು ಬಗೆಹರಿಸುವುದು ಅಷ್ಟು ಸುಲಭದ ಮಾತಲ್ಲ. ಕೌಶಲ ತರಬೇತಿ ಕಾರ್ಯಕ್ರಮಗಳು ನಿರೀಕ್ಷಿತ ಫಲ ಕೊಟ್ಟಿಲ್ಲ.

The candidate Seeking job in Railways is asking whether I will get job before Election.

13

टाइम्स आफ इंडिया/बेंगलूर
THE TIMES OF INDIA/BANGALORE
31 MAR 2018

# Thieves rob train passengers in Delhi

**New Delhi:** Four armed robbers looted valuables from passengers of an Ambala-bound train early on Friday, soon after it departed from the Hazrat Nizamuddin station here, officials said.

The incident took place around 4am on the Nizamuddin-Ambala passenger train when it stopped in an area between the station and Tilak Bridge. The train had left Nizamuddin at 3:56am, they said.

"Four robbers armed with knives threatened 12 to 15 passengers travelling in the train's general coach and decamped with their valuables such as mobile phones," northern railway spokesman Nitin Chowdhary said.

"The robbery took place when the train stopped at Nizamuddin-Tilak Bridge. One person suffered minor injuries, rest of the passengers are fine," he said.



'ROBBERY AT WEE HOURS

The passengers have filed a preliminary complaint at the New Delhi railway station and the Government Railway Police (GRP) has registered a case, the official said. The spokesman said that a joint team of the GRP and the Railway Protection Force (RPF) are probing the matter. PTI

संयुक्त कर्नाटक/हुबली
SAMYUKTHA KARNATAKA/HUBLI.
31 MAR 2018

# ರೈಲು ದರೋಡೆ

ನವದೆಹಲಿ: ಅಂಬಾಲಾಗೆ ತೆರಳುತ್ತಿದ್ದ ನಿಜಾಮುದ್ದೀನ್ ಎಕ್ಸ್‌ಪ್ರೆಸ್ ರೈಲಿಗೆ ಶುಕ್ರವಾರ ಮುಂಜಾನೆ ನುಗ್ಗಿರುವ ಶಸ್ತ್ರಸಜ್ಜಿತ ಉಗ್ರರು ಪ್ರಯಾಣಿಕರನ್ನು ದರೋಡೆಗೈದು ಪರಾರಿಯಾಗಿದ್ದಾರೆ.